# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊಸಕೋಟೆ.

**ಓ.ಎಸ್. ಸಂಖ್ಯೆ.482/2022** ಪಿ.ಡಬ್ಲೂ .2

ದಿನಾಂಕಃ 27-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ **8** ನೇ ಪ್ರತಿವಾದಿ ಪರ ವಕೀಲರಿಂದಃ

1. ನನಗೆ ಓದಲು ಬರೆಯಲು ಬರುತ್ತದೆ. ನಾನು ಬಿ.ಎ ಪದವೀಧರೆ. ನನಗೆ ಸ್ವಲ್ಪ ಮಟ್ಟಿಗೆ ದಾವೆಯ ಬಗ್ಗೆ ಮಾಹಿತಿ ಇದೆ. ನನ್ನ ಗಂಡ ಜೀವಂತ ಇದ್ದಾಗ ಈ ದಾವೆ ಸಲ್ಲಿಸಿದ್ದರು ಎಂದರೆ ಹೌದು. ಅವರು ಈ ದಾವೆಯಲ್ಲಿ ಪಾಟೀ ಸವಾಲಿಗೂ ಮುನ್ನಾ ಮರಣ ಹೊಂದಿರುತ್ತಾರೆ ಎಂದರೆ ಹೌದು.

2. ನಾನು ದಾವೆಯಲ್ಲಿ ಅನುಸೂಚಿ ಎ ರಲ್ಲಿನ ಐಟಂ ನಂ.1 ರಿಂದ 3 ಮತ್ತು 8 ರಿಂದ 38 ರ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳು ಎಂದು ಹೇಳಿದ್ದೇನೆ ಎಂದರೆ ಹೌದು. ಅದೇ ರೀತಿ ದಾವಾ ಬಿ ಅನುಸೂಚಿಯಲ್ಲಿನ ಸ್ವತ್ತುಗಳು ಸಹ ಒಟ್ಟು ಕುಟುಂಬದ ಆಸ್ತಿಗಳು ಎಂದು ಹೇಳಿದ್ದೇನೆ ಎಂದರೆ ಹೌದು. ಸದರಿ ಆಸ್ತಿಗಳು ದಿ.10-08-1967 ರ ವಿಭಾಗದ ಮೂಲಕ 1 ನೇ ಪ್ರತಿವಾದಿಗೆ ಬಂದಿರುತ್ತವೆ ಎಂದು ಹೇಳಿದ್ದೇನೆ ಎಂದರೆ ಹೌದು. ಸದರಿ ವಿಭಾಗ 1 ನೇ ಪ್ರತಿವಾದಿ ಮತ್ತು ಅವರ ತಂದೆ ನಾರಾಯಣಗೌಡ ರವರ ನಡುವೆ ಆಗಿರುತ್ತದೆ ಎಂದರೆ ಹೌದು. 1 ನೇ ಪ್ರತಿವಾದಿಗೆ ವಾದಿ ರಮೇಶ್, 2 ನೇ ಪ್ರತಿವಾದಿಯ ಗಂಡ ಶ್ರೀನಿವಾಸ್, 7 ಮತ್ತು 8 ನೇ ಪ್ರತಿವಾದಿಗಳು ಮಕ್ಕಳು ಎಂದರೆ ಹೌದು. ಸದರಿ 4 ಜನ ಮಕ್ಕಳು 1967 ರ ಕಾಲಕ್ಕೆ ಜನಿಸಿದ್ದರು ಎಂದರೆ ಹೌದು. 1967 ರ ವಿಭಾಗದ ಮೂಲಕ 1 ನೇ ಪ್ರತಿವಾದಿಗೆ ಸುಮಾರು 52 ವರೆ ಎಕರೆ ಜಮೀನು ಬಂದಿರುತ್ತದೆ ಎಂದು ದಾವೆಯಲ್ಲಿ ಹೇಳಿದ್ದೇನೆ

ಎಂದರೆ ಹೌದು. ಸದರಿ ಒಟ್ಟು ಕುಟುಂಬದ ಆಸ್ತಿಗಳಲ್ಲಿ ತೆಂಗು, ಮಾವು, ದ್ರಾಕ್ಷಿ ಮತ್ತು ವಾಣಿಜ್ಯ ಬೆಳೆಗಳನ್ನು ಬೆಳೆಯುತ್ತಿದ್ದರು ಎಂದು ದಾವೆಯಲ್ಲಿ ಹೇಳಿದ್ದೇನೆ ಎಂದರೆ ಹೌದು. ಸದರಿ ಬೆಳೆಗಳಿಂದ 1 ನೇ ಪ್ರತಿವಾದಿಗೆ ಸಾಕಷ್ಟು ಆದಾಯ ಇತ್ತು ಎಂದು ಹೇಳಿದ್ದೇನೆ ಎಂದರೆ ಸಾಕ್ಷಿ ತಕ್ಕಮಟ್ಟಿಗೆ ಆದಾಯ ಬರುತ್ತಿತ್ತು ಎಂದು ನುಡಿಯುತ್ತಾರೆ. ಸದರಿ ಆದಾಯ ಅವರ ಕುಟುಂಬ ನಿರ್ವಹಣೆಗೆ ಸಾಕಾಗುತ್ತಿತ್ತು ಎಂದರೆ ಹೌದು. ಆ ಕಾರಣ ಆಸ್ತಿಗಳನ್ನು ಮಾರಾಟ ಮಾಡುವ ಅಥವಾ ಸಾಲ ಮಾಡುವ ಅವಶ್ಯಕತೆ 1 ನೇ ಪ್ರತಿವಾದಿಗೆ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಗೆ ಒಟ್ಟು ಕುಟುಂಬದ ಆಸ್ತಿಗಳ ಆದಾಯವನ್ನು ಹೊರತುಪಡಿಸಿ ಬೇರೆ ಆದಾಯ ಇರಲಿಲ್ಲ ಎಂದರೆ ಹೌದು. 1 ನೇ ಪ್ರತಿವಾದಿ ಜೀವಂತ ಇದ್ದಾಗ ಒಟ್ಟು ಕುಟುಂಬದ ಎಲ್ಲಾ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದರು ಎಂದು ದಾವೆಯಲ್ಲಿ ಹೇಳಿದ್ದೇನೆ ಎಂದರೆ ಹೌದು. ಸಾಕ್ಷಿ ಮುಂದುವರೆದು ನನ್ನ ಯಜಮಾನರು ಸಹ ನೋಡಿಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ.

3. 1 ನೇ ಪ್ರತಿವಾದಿಯ ಮೊದಲನೆ ಮಗ ಶ್ರೀನಿವಾಸ್ ರವರು 1985 ರಲ್ಲಿ ಮರಣ ಹೊಂದಿರುತ್ತಾರೆ ಎಂದರೆ ಹೌದು. ಸದರಿ ಶ್ರೀನಿವಾಸ್ ರವರಿಗೆ ಯಾವುದೇ ಸ್ವಂತ ಆದಾಯ ಇತ್ತೇ ಎಂದರೆ ಇರಲಿಲ್ಲ ಎಂದು ನುಡಿಯುತ್ತಾರೆ. ಒಟ್ಟು ಕುಟುಂಬದಲ್ಲಿ ಇದ್ದಾಗ 2 ನೇ ಪ್ರತಿವಾದಿ ಬೇರೆ ಕೆಲಸಕ್ಕೆ ಹೋಗುತ್ತಿದ್ದರೇ ಎಂದರೆ ಇಲ್ಲ, ಮನೆಯಲ್ಲಿಯೇ ಇದ್ದರು. ಅವರಿಗೂ ಸಹ ಯಾವುದೇ ಸ್ವಂತ ಆದಾಯ ಇರಲಿಲ್ಲ ಎಂದರೆ ಸರಿ. ನನ್ನ ಗಂಡ ರಮೇಶ್ ರವರು ಜೀವಂತ ಇದ್ದಾಗ ಸ್ವಲ್ಪ ದಿನ ವಕೀಲ ವೃತ್ತಿ ನಡೆಸಿರುತ್ತಾರೆ. ಸದರಿ ವೃತ್ತಿಯಿಂದ ಎಷ್ಟು ಆದಾಯ ಬರುತ್ತಿತ್ತು ಎಂದು ನನಗೆ ಗೊತ್ತಿಲ್ಲ. ಅವರು ಯಾವ ಸಾಲಿನವರೆಗೂ ವಕೀಲ

ವೃತ್ತಿ ಮಾಡಿರುತ್ತಾರೆ ಎಂದು ಗೊತ್ತಿಲ್ಲ. ವಾದಿ ಯಾವುದೇ ವಕೀಲರ ವೃತ್ತಿ ಮಾಡುತ್ತಿರಲಿಲ್ಲ ಮತ್ತು ಅವರಿಗೆ ಯಾವುದೇ ಆದಾಯ ಇಲ್ಲದೆ ಇದ್ದರೂ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಬಗ್ಗೆ ಯಾವುದೇ ದಾಖಲೆಗಳನ್ನು ನಾನು ಹಾಜರು ಮಾಡಿಲ್ಲ. ಸದರಿ ದಾಖಲೆಗಳನ್ನು ಹಾಜರು ಮಾಡಲು ತೊಂದರೆ ಇದೆಯಾ ಎಂದರೆ ಸಾಕ್ಷಿ ಸದರಿ ದಾಖಲೆಗಳ ಬಗ್ಗೆ ನನಗೆ ಗೊತ್ತಿಲ್ಲ, ಆದಾಯ ತೆರಿಗೆ ದಾಖಲೆಗಳನ್ನು ಹಾಜರು ಮಾಡಬಹುದು. ನನ್ನ ಮದುವೆಯಾದ ನಂತರ ನನಗೆ ಬೇರೆ ಯಾವುದೇ ಆದಾಯ ಇರಲಿಲ್ಲ ಎಂದರೆ ಹೌದು.

4. 1 ನೇ ಪ್ರತಿವಾದಿ ತನ್ನ ಒಟ್ಟು ಕುಟುಂಬದ ಆದಾಯದಿಂದ ತನ್ನ ಹೆಸರಿನಲ್ಲಿ ಮತ್ತು 2 ನೇ ಪ್ರತಿವಾದಿಯ ಹೆಸರಿನಲ್ಲಿ ಕೆಲವು ಆಸ್ತಿಗಳನ್ನು ಖರೀದಿಸಿರುತ್ತಾರೆ ಎಂದರೆ ಹೌದು. 2 ನೇ ಪ್ರತಿವಾದಿ ಹೆಸರಿನಲ್ಲಿ ಆಸ್ತಿ ಖರೀದಿಸಿದ ನಂತರ ನನ್ನ ಹೆಸರಿನಲ್ಲಿಯೂ ಸಹ ಆಸ್ತಿಗಳನ್ನು ಖರೀದಿ ಮಾಡುವಂತೆ 1 ನೇ ಪ್ರತಿವಾದಿಯೊಂದಿಗೆ ಜಗಳ ಮಾಡಿರುತ್ತೇನೆ ಎಂದರೆ ಸುಳ್ಳು. ಆ ನಂತರ ಕುಟುಂಬದ ನೆಮ್ಮದಿಗಾಗಿ 1 ನೇ ಪ್ರತಿವಾದಿ ಒಟ್ಟು ಕುಟುಂಬದ ಆದಾಯದಿಂದ ನನ್ನ ಹೆಸರಿನಲ್ಲಿಯೂ ಸಹ ಕೆಲವು ಆಸ್ತಿಗಳನ್ನು ಖರೀದಿಸಿರುತ್ತಾರೆ ಎಂದರೆ ಸುಳ್ಳು. ದಾವಾ ಐಟಂ ನಂ.35 ನ್ನು 1983 ರಲ್ಲಿ ಒಟ್ಟು ಕುಟುಂಬದ ಆದಾಯದಿಂದ ಖರೀದಿಸಿರುತ್ತಾರೆ ಎಂದರೆ ದಾವೆಯಲ್ಲಿ ಹೇಳಿದ್ದೇನೆ ಎಂದರೆ ಹೌದು. ಸದರಿ ಆಸ್ತಿಯಲ್ಲಿ ಮಳಿಗೆಗಳು ಮತ್ತು ಸಿನಿಮಾ ಟಾಕ್ಸಿಸ್, ಗೋಡೌನ್ ಕಟ್ಟಿದ್ದಾರೆ ಎಂದರೆ ಹೌದು. ಸದರಿ ಆಸ್ತಿಯಿಂದ ತಿಂಗಳಿಗೆ 1 ಲಕ್ಷದ 25 ಸಾವಿರ ಆದಾಯ 2005 ರ ಸಾಲಿನಲ್ಲಿ ಬರುತ್ತಿತ್ತು ಎಂದು ದಾವೆಯಲ್ಲಿ ಹೇಳಿದ್ದಾರೆ ಎಂದರೆ ಇರಬಹುದು. ಅದೇ ರೀತಿ ಒಟ್ಟು ಕುಟುಂಬದ ಆಸ್ತಿಗಳಲ್ಲಿ ಕೋಳಿ ಫಾರಂ ಮಾಡಿದ್ದರು ಎಂದು ಹೇಳಿದ್ದೇವೆ ಎಂದರೆ ಹೌದು. ಅದರಿಂದ ತಿಂಗಳಿಗೆ ಸುಮಾರು

2.50 ಲಕ್ಷ ಅದಾಯ ಬರುತ್ತಿತ್ತು ಎಂದು ಹೇಳಿದ್ದೇವೆ ಎಂದರೆ ಗೊತ್ತಿಲ್ಲ. ಈ ದಾವೆಯ ಬಗ್ಗೆ ಸಂಪೂರ್ಣ ಮಾಹಿತಿ ಇದೆ.

5. 1 ನೇ ಪ್ರತಿವಾದಿ ಜೀವಂತ ಇದ್ದಾಗ ತನ್ನ 4 ಜನ ಮಕ್ಕಳ ನಡುವೆ ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ಯಾವುದೇ ವಿಭಾಗ ಆಗಿಲ್ಲ ಎಂದರೆ ಸಾಕ್ಷಿ ಹೆಣ್ಣು ಮಕ್ಕಳಿಗೆ ಭಾಗ ಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ಆ ಬಗ್ಗೆ ದಾಖಲೆಗಳನ್ನು ಹಾಜರು ಮಾಡಿರುತ್ತೀರಾ ಎಂದರೆ ಹಾಜರು ಮಾಡಿರಬಹುದು. 1 ನೇ ಪ್ರತಿವಾದಿ 4 ಬಾರಿ ಶಾಸಕರಾಗಿದ್ದರು ಎಂದರೆ ಹೌದು.

6. ದಾವಾ ಐಟಂ ನಂ.4 ರಿಂದ 7 ರ ಆಸ್ತಿಗಳನ್ನು 8 ನೇ ಪ್ರತಿವಾದಿಗೆ ಅವರ ತಾಯಿಯಿಂದ ಬಂದ ಆಸ್ತಿಗಳು ಎಂದರೆ ಸರಿಯಲ್ಲ. ದಾವಾ ಐಟಂ ನಂ.39 ನ್ನು ನಾನು ಈ ದಾವೆಯಲ್ಲಿ ಹಾಜರಾದ ನಂತರ ಸೇರಿಸಿರುತ್ತೇನೆ ಎಂದರೆ ಹೌದು. ಸದರಿ ಆಸ್ತಿಯನ್ನು 1 ನೇ ಪ್ರತಿವಾದಿ ಶಾಸಕರಾಗಿದ್ದ ಕಾರಣ ಸರ್ಕಾರದಿಂದ ನೀಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಅಸ್ತಿಯನ್ನು ದಿ.15-04-1994 ರಂದು 1 ನೇ ಪ್ರತಿವಾದಿ 8 ನೇ ಪ್ರತಿವಾದಿಗೆ ದಾನ ಮಾಡಿರುತ್ತಾರೆ ಎಂದರೆ ಅವರು ಬರೆಯಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಗೆ ಸರ್ಕಾರದಿಂದ ಪಿಂಚಣಿ ಬರುತ್ತಿತ್ತು ಎಂದರೆ ಗೊತ್ತಿಲ್ಲ. ಸದರಿ ಪಿಂಚಣಿ ಹಣವನ್ನು ಐಟಂ ನಂ.39 ರ ಆಸ್ತಿಯನ್ನು ಪಡೆಯಲು ವ್ಯಯ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು 8 ನೇ ಪ್ರತಿವಾದಿ ತಮ್ಮ ಮಗಳಿಗೆ ದಿ.17-02-2006 ರಂದು ದಾನ

ಮಾಡಿರುತ್ತಾರೆ ಎಂದರೆ ಹೌದು. 8 ನೇ ಪ್ರತಿವಾದಿಯ ಮಗಳನ್ನು ಈ ದಾವೆಯಲ್ಲಿ ಪಕ್ಷಗಾರನ್ನಾಗಿ ಮಾಡಿಲ್ಲ ಎಂದರೆ ಹೌದು.

ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು, ಮುಂದೂಡಲಾಯಿತು.

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು.)**

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಹೊಸಕೋಟೆ.